# ಆರಂಭಿಕ ಸಾಕ್ಷರತಾ ಕಾರ್ಯಕ್ರಮ[1]ವೊಂದರ ಪ್ರಯಾಣ

**ಕೀರ್ತಿ ಜಯರಾಮ್**

**ಪೀಠಿಕೆ**

ಆರಂಭಿಕ ಸಾಕ್ಷರತಾ ಕಾರ್ಯಕ್ರಮದ ಪ್ರಯಾಣವು ಸುಮಾರು ಎಂಟು ವರ್ಷಗಳ ಕಾಲ ತರಗತಿಯ ಒಳಗೆ ನಿರಂತರವಾಗಿ ಮತ್ತು ತೀವ್ರವಾಗಿ ತೊಡಗಿಕೊಳ್ಳುವ ಮೂಲಕ ಹಾಗೂ ಮಕ್ಕಳು, ಶಿಕ್ಷಕರು, ಪೋಷಕರು ಮತ್ತು ಸಮುದಾಯಗಳನ್ನು ತೊಡಗಿಸುವ ಮೂಲಕ ನಡೆಯಿತು. ಕಾರ್ಯಕ್ರಮದ ಅಡಿಯಲ್ಲಿ ನಾವು ಹೊಸ ಒಳನೋಟಗಳನ್ನು ಪಡೆದಂತೆಲ್ಲಾ ಹಳೆಯ ಘಟಕಗಳ ಜಾಗದಲ್ಲಿ ಹೊಸ ಘಟಕಗಳನ್ನು ತರುವ ಮೂಲಕ  ವ್ಯವಸ್ಥಿತ ವಿಧಾನಗಳು ಮತ್ತು ತರಗತಿ ಪ್ರಕ್ರಿಯೆಗಳು ಸಹಜವಾಗಿ ವಿಕಾಸಗೊಂಡವು. ಕಾರ್ಯಕ್ರಮದ ಗುಣಾತ್ಮಕ ಅಂಶಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ಪ್ರಕ್ರಿಯೆಯನ್ನು ನಾವು ನಮ್ಮ ಜ್ಞಾನ-ನಿರ್ಮಾಣ ಪ್ರಯೋಗವಾಗಿ ನೋಡಲು ಇಚ್ಛಿಸುತ್ತೇವೆ. ಈ ಲೇಖನದಲ್ಲಿ ಆರ್ಗನೈಸೇಷನ್ ಫಾರ್ ಅರ್ಲಿ ಲಿಟರರಿ ಪ್ರಮೋಷನ್ (ಆರಂಭಿಕ ಸಾಕ್ಷರತೆ ಅಭಿವೃದ್ಧಿ ಸಂಸ್ಥೆ; OELP) ದೆಹಲಿಯು ಕೈಗೊಂಡು ನಡೆಸುತ್ತಿರುವ, ಸೈದ್ಧಾಂತಿಕ ಚಿಂತನೆಗಳನ್ನು ತರಗತಿ ಪ್ರಕ್ರಿಯೆಯಾಗಿ ಪರಿವರ್ತಿಸಿ ಆ ಮೂಲಕ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವೃತ್ತಿಪರ ಪರಿಣಿತರು ಲಭ್ಯವಾಗುವಂತೆ ಮಾಡುವ ಮತ್ತು ದೊಡ್ಡ ಪ್ರಮಾಣದಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಬಹುದಾದ ಕಾರ್ಯಕ್ರಮಗಳ ಮೇಲೆ ಕೇಂದ್ರೀಕರಿಸಲಾಗಿದೆ. ಓಇಎಲ್‌ಪಿ ಯ ಈ ಪ್ರಯತ್ನಗಳನ್ನು ಇತರ ಕಡೆಗಳಲ್ಲಿ ಪುನರಾವರ್ತಿಸಬಹುದಾದ ಸಾಧ್ಯತೆಯು ಮುಖ್ಯ ಉದ್ದೇಶವಾಗಿದ್ದು ನಾವು ಅವನ್ನು ನಮ್ಮ ಮುಖ್ಯವಾಹಿನಿ ವ್ಯವಸ್ಥೆಯೊಂದಿಗೆ ಹೊಂದಿಸಲು ಪ್ರಯತ್ನಿಸಿದ್ದೇವೆ. ಹಾಗಾಗಿ ಭವಿಷ್ಯದಲ್ಲಿ ಇದನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಅನುಕೂಲವಾಗುವಂತೆ ನಮ್ಮ ಪ್ರಕ್ರಿಯೆಯು ಕಾರ್ಯಸಾಧುವಾದ ವ್ಯಾಪ್ತಿಯಲ್ಲಿದೆ.

**ಸಂದರ್ಭ**

2006 ನೇ ವರ್ಷದ ಅವಧಿಯಲ್ಲಿ ಒಇಎಲ್‌ಪಿ ಯು ದೆಹಲಿಯ ಹೊರವಲಯದಲ್ಲಿನ ದುರ್ಬಲ ಮತ್ತು ನಿರ್ಲಕ್ಷ್ಯಕ್ಕೊಳಗಾದ ಸಾಮಾಜಿಕ-ಆರ್ಥಿಕ ಹಿನ್ನೆಲೆಯ ಪುಟ್ಟ ಮಕ್ಕಳಲ್ಲಿ ಅರ್ಥಪೂರ್ಣವಾದ ಆರಂಭಿಕ ಸಾಕ್ಷರತೆಯನ್ನು ಅಭಿವೃದ್ಧಿಪಡಿಸಲು ಭದ್ರ ಬುನಾದಿಯನ್ನು ಹಾಕುವ ಮಾರ್ಗಗಳನ್ನು ಹುಡುಕಲು

ಆರಂಭಿಸಿತು. 2008 ರಲ್ಲಿ ಒಇಎಲ್‌ಪಿ ಯು ಬರಪೀಡಿತ ರಾಜಾಸ್ಥಾನದ ಗ್ರಾಮೀಣ ಪ್ರದೇಶಕ್ಕೆ ಸ್ಥಳಾಂತರಗೊಂಡು ಅದರ ಕಾರ್ಯಗಳು ಈಗಲೂ ಪ್ರಗತಿಯಲ್ಲಿವೆ.

ಒಇಎಲ್‌ಪಿ ಯು ಕಾರ್ಯವ್ಯಾಪ್ತಿಯಲ್ಲಿ ಬರುವ ಮಕ್ಕಳು ಮೂಲತಃ ಸಾಮಾಜಿಕವಾಗಿ ಆಳವಾಗಿ ಬೇರೂರಿದ ಮತ್ತು ತುಂಬಾ ಕಟ್ಟುನಿಟ್ಟಾಗಿ ವಿಂಗಡಣೆಗೊಂಡ ಜಾತಿ ಆಧಾರಿತ ಸಂಬಂಧಗಳ ವಿನ್ಯಾಸದ ನಡುವೆ ಬೆಳೆದವರು. ಅವರು ದುರ್ಭರವಾದ ಭೌತಿಕ ವಾತಾವರಣದಲ್ಲಿ ವಾಸಿಸುತ್ತಿದ್ದು ಅವರ ಸಮುದಾಯಗಳು ತಮ್ಮ ಜೀವನೋಪಾಯಕ್ಕಾಗಿ ಹತ್ತಿರದ ಕಲ್ಲಿನ ಗಣಿಗಾರಿಕೆ ಅಥವಾ ಮಳೆ ಆಧಾರಿತ ಕೃಷಿಯಲ್ಲಿ ದಿನಗೂಲಿ ಕೆಲಸದಲ್ಲಿ ತೊಡಗಿವೆ. ಇವರಲ್ಲಿ ವಲಸೆಯು ಸರ್ವೇಸಾಮಾನ್ಯವಾಗಿದ್ದು ಈ ಎಲ್ಲ ಕುಟುಂಬಗಳು ಕೊಯಿಲು ಮತ್ತು ಬಿತ್ತನೆಯ ಕಾಲಗಳಲ್ಲಿ ತಮಗೆ ದಿನಗೂಲಿ ದುಡಿಮೆಗೆ ಅವಕಾಶ ನೀಡುವ ಪಕ್ಕದ ರಾಜ್ಯಗಳಿಗೆ ವಲಸೆ ಹೋಗುತ್ತವೆ. ಹಾಗಾಗಿ ಈ ಮಕ್ಕಳ ಪ್ರಪಂಚವೆಲ್ಲ ಕಥನ ಮತ್ತು ದೃಷ್ಟಾಂತಗಳ ಮೌಖಿಕ ಸಂವಹನಕ್ಕೆ ಸೀಮಿತಗೊಂಡಿದ್ದು ತರಗತಿಗಳಲ್ಲಿನ ಸನ್ನಿವೇಶಗಳು ಅವರ ಜೀವನ ಸಂದರ್ಭಕ್ಕೆ ಹೊಂದಾಣಿಕೆಯಾಗದಿರುವುದನ್ನು ಕಾಣುತ್ತೇವೆ. ಆದ್ದರಿಂದ ಇದು ಕೇವಲ ಕಿರಿಯ ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ವಯಸ್ಕ ವಿದ್ಯಾರ್ಥಿಗಳಿಗೂ ಸವಾಲಿನ ಕಾರ್ಯವಾಗಿರುವುದನ್ನು ನಾವು ನೋಡಿದ್ದೇವೆ. (ಡೊನಾಲ್ಡ್‌ಸನ್, 1978)

**ನಮ್ಮ ಗ್ರಹಿಕೆ**

ಭಾರತದ ಸಂದರ್ಭದಲ್ಲಿ ಆರಂಭಿಕ ಸಾಕ್ಷರತೆಯು ಹೊಸಕ್ಷೇತ್ರವಾಗಿದ್ದು ಇದು ವಿಭಿನ್ನ ಭಾರತೀಯ ಭಾಷೆಗಳು ಮತ್ತು ಸವಾಲಿನ ಸನ್ನಿವೇಶಗಳ ನಡುವೆ ಆರಂಭಿಕ ಸಾಕ್ಷರತೆಯನ್ನು ಸಾಧಿಸುವಲ್ಲಿನ ಪ್ರಯತ್ನಗಳನ್ನು ಒಳಗೊಂಡಿದೆ. ಆದ್ದರಿಂದ ಒಇಎಲ್‌ಪಿ ಯು ಆರಂಭಿಕ ಸಾಕ್ಷರತೆ ಮತ್ತು ಭಾಷಾ ಕಲಿಕೆಯ ಕುರಿತಾದ ವ್ಯಾಪಕ ಅಧ್ಯಯನಗಳಿಂದ ದೊರೆಯುವ ಒಳನೋಟಗಳನ್ನು ಪಡೆದು ಕಾರ್ಯೋನ್ಮುಖವಾಗಿದೆ. ಪರಿಕಲ್ಪನಾತ್ಮಕ ಮತ್ತು ಅನುಷ್ಠಾನ ಹಂತದ ಆರಂಭಿಕ ವರ್ಷಗಳಲ್ಲಿ ಒಇಎಲ್‌ಪಿ ಯು ಮೇರಿ ಕ್ಲೇಯವರ ಕೃತಿ “ಎಮರ್ಜೆಂಟ್ ಲಿಟರಸಿ” (ಉದಯೋನ್ಮುಖ ಸಾಕ್ಷರತೆ) ಯಿಂದ ಬಹಳಷ್ಟು ಒಳನೋಟಗಳನ್ನು ಪಡೆದಿದೆ. ಈ ಕೃತಿಯು ಆರಂಭಿಕ ಸಾಕ್ಷರತೆಯ ಬುನಾದಿಯನ್ನು ನಿರ್ಮಿಸುವಲ್ಲಿ ಮಗುವಿನ ಮನೆಯಲ್ಲಿನ ಆರಂಭಿಕ ಅನುಭವಗಳ ಮಹತ್ವವನ್ನು

ಸೂಕ್ಷ್ಮವಾಗಿ ಗ್ರಹಿಸುವಂತೆ ಮಾಡಿದೆ. ಶಾಲಾ ಶಿಕ್ಷಣಕ್ಕೆ ಮಕ್ಕಳು ವಿಭಿನ್ನವಾಗಿ ಸಿದ್ಧರಾಗಿರುತ್ತಾರೆ ಎಂಬ ವಾಸ್ತವಾಂಶವನ್ನು ನಮ್ಮ ತರಗತಿ ಕೋಣೆಗಳಲ್ಲಿನ ಕಾರ್ಯಗಳು ಪುಷ್ಟೀಕರಿಸಿದವು.

ಮೇಲಿನ ಚಿಂತನೆಯನ್ನು ಆಧರಿಸಿ, ತಮ್ಮ ಬಾಲ್ಯದ ಬೆಳವಣಿಗೆಯ ವರ್ಷಗಳಲ್ಲಿ ಮುದ್ರಿತ ಸಾಮಗ್ರಿಗಳಿಂದ ಸ್ವಾಭಾವಿಕ ಕಲಿಕೆಗೆ ಕನಿಷ್ಟ ಅವಕಾಶಗಳನ್ನು ಹೊಂದಿರುವ ಮಕ್ಕಳ ವಿಶೇಷ ಸಾಕ್ಷರತಾ ಕಲಿಕೆಯ ಅಗತ್ಯಗಳನ್ನು ಗುರುತಿಸುವುದು ಮತ್ತು ಪೂರೈಸುವುದು ಒಇಎಲ್‌ಪಿಗೆ ಮಹತ್ವಪೂರ್ಣವೆನಿಸಿತು. ಅಲ್ಲದೆ ಶಾಲಾಪೂರ್ವ ಕಾರ್ಯಕ್ರಮಕ್ಕೆ ಒಳಗಾಗದೆ ಶಾಲೆಗೆ ನೇರವಾಗಿ ಬಂದ ಮಕ್ಕಳಲ್ಲಿ ಆರಂಭಿಕ ಸಾಕ್ಷರತೆಯನ್ನು ಬೆಳೆಸಲು ಸೂಕ್ತ ವಿಕಾಸಾತ್ಮಕ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವ ಅವಶ್ಯಕತೆಯನ್ನು ನಾವು ಮನಗಂಡೆವು. ಭಾಷೆಯ ಬೆಳವಣಿಗೆಯಲ್ಲಿ ಮಹತ್ವಪೂರ್ಣ ಪಾತ್ರ ನಿರ್ವಹಿಸುವ ಮನೆ ಮತ್ತು ಸಾಮಾಜಿಕ ಜಗತ್ತಿನ ಅನುಭವಗಳ ಮೂಲಕ ಅರ್ಥಸೃಷ್ಟಿ ಪ್ರಕ್ರಿಯೆಯ ಭಾಗವಾಗಿ ಸಾಕ್ಷರತೆಯನ್ನು ನೋಡುವ ವೈಗೋಟ್‌ಸ್ಕಿಯ ಸಮಾಜೋ-ಸಾಂಸ್ಕೃತಿಕ ಆಯಾಮದಲ್ಲಿಯೇ ಗುರುತಿಸಿ ಸಾಧಿಸುವ ಮಾರ್ಗವನ್ನು ಒಇಎಲ್‌ಪಿ ಯು ಆರಿಸಿಕೊಂಡಿತು. ಮನೆಯ ಭಾಷೆಗಳಿಂದ ಶಾಲಾ ಭಾಷೆಗೆ ಸ್ಥಿತ್ಯಂತರಗೊಳ್ಳುವ ವಿಷಯವೂ ಮಕ್ಕಳನ್ನು ತೀವ್ರವಾಗಿ ತೊಡಗಿಸುವಲ್ಲಿ ಒಂದು ಪ್ರಮುಖ ಕ್ಷೇತ್ರವಾಯಿತು. ನಮ್ಮ ತರಗತಿ ಆಧಾರಿತ ಪ್ರಯತ್ನಗಳ ಮೂಲಕ ನಾವು ಪಡೆದ ಮತ್ತೊಂದು ಪ್ರಮುಖ ಅಂಶವೆಂದರೆ, ಕೇವಲ ಶಾಲೆಗೆ ಬರುವ ಅವಕಾಶವನ್ನು ಒದಗಿಸುವುದರಿಂದ ತರಗತಿಯನ್ನು ಕಲಿಕೆಗೆ ಪೂರಕವಾದ ಸ್ಥಳವನ್ನಾಗಿ ಮಾಡಲಾಗದು ಎಂಬ ಅನುಭವ. ಸಾಕ್ಷರತೆಯ ಕುರಿತಾದ ಇತ್ತೀಚಿನ ಆಯಾಮಗಳ ಜ್ಞಾನವನ್ನು ಪಡೆಯುವ ಕಾರ್ಯವನ್ನು ನಾವು ಆರಂಭಿಸಿದೆವು. ಇದರಿಂದ ನಾವು ಸಾಕ್ಷರತೆಯು ಸ್ವತಂತ್ರವಾದ ಅಥವಾ ತಟಸ್ಥವಾದ ಬೌದ್ಧಿಕ ಪ್ರಕ್ರಿಯೆಯಾಗಿರದೆ ಅದೊಂದು ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭ್ಯಾಸವಾಗಿದೆ ಎಂಬ ಅಂಶವನ್ನು ಅರಿತೆವು. (ಸ್ಟ್ರೀಟ್, 1984) ನಮ್ಮ ಈ ಎಲ್ಲ ಕಾರ್ಯಗಳ ಅನುಭವವು 'ತರಗತಿಯಲ್ಲಿ ನೀವೇನಾಗಿದ್ದೀರಿ ಎಂಬುದು ಮುಖ್ಯವಾಗುತ್ತದೆ' ಎನ್ನುವ ಸೂಕ್ಷ್ಮತೆಯನ್ನು ನೀಡಿತು (ಬ್ಲೂಮ್ ಅಂಡ್ ಡೈಲ್, 1997). ನ್ಯಾಷನಲ್ ರೀಡಿಂಗ್ ಪ್ಯಾನೆಲ್(2000) ನ ಫಲಿತಾಂಶಗಳನ್ನು ಮತ್ತು ಆ ನಂತರ ಲಭ್ಯವಾದ ಸಾಹಿತ್ಯವನ್ನು ಆಧರಿಸಿ (ಡ್ಯೂಕ್ ಅಂಡ್ ಪಿಯರ್‌ಸನ್, 2002; ಪಿಯರ್‌ಸನ್, 2001), ಒಇಎಲ್‌ಪಿಯು ತನ್ನ ಕಾರ್ಯಗಳನ್ನು ಒಂದು ಸಮತೋಲಿತ ವಿಧಾನದೊಳಗೆ ಅರ್ಥಪೂರ್ಣ ತೊಡಗಿಸುವಿಕೆ ಮತ್ತು ವ್ಯವಸ್ಥಿತ ಕೌಶಲ ಬೆಳವಣಿಗೆಯ

ಕಾರ್ಯಕ್ರಮವನ್ನು ಕೈಗೊಳ್ಳಲು ನಿರ್ಧರಿಸಿತು. ಇದರಲ್ಲಿ ಬುನಾದಿ ಕೌಶಲಗಳ ಜೊತೆಗೆ ಉನ್ನತ ಶ್ರೇಣಿಯ ಕೌಶಲಗಳನ್ನು ಬೆಳೆಸಲು ಗಮನ ಹರಿಸಲಾಯ್ತು. ಮುಂದಿನ ಭಾಗದಲ್ಲಿ ಇದನ್ನು ವಿವರವಾಗಿ ಚರ್ಚಿಸಲಾಗುವುದು. (ಒಇಎಲ್‌ಪಿ ಯ ಮೂರು ಕವಲು ವಿಧಾನ).

**ಸವಾಲುಗಳು**

ಚಲನಶೀಲ ಮತ್ತು ಸಂಕೀರ್ಣವಾದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಭಾಷಾ ಸಂದರ್ಭಗಳು ಮತ್ತು ಶ್ರೇಣೀಕೃತ ಸಮಾಜಗಳು ಒಡ್ಡುವ ಸವಾಲುಗಳನ್ನು ಎದುರಿಸುವುದು ಇನ್ನೂ ಮುಂದುವರಿದಿದೆ. ಹಲವಾರು ಮಕ್ಕಳು ಯಾಂತ್ರಿಕವಾಗಿ ತರಗತಿ ಪ್ರಕ್ರಿಯೆಯಲ್ಲಿ ತೊಡಗಿರುವುದನ್ನು ನಾವು ಕಾಣುತ್ತಲೇ ಬರುತ್ತೇವೆ. ಅವರನ್ನು ಸಕ್ರಿಯವಾಗಿ ತರಗತಿ ಪ್ರಕ್ರಿಯೆಯಲ್ಲಿ ತೊಡಗಿಸುವುದು ನಮಗೊಂದು ಸವಾಲಾಗಿದೆ. ನಾವು ಎದುರಿಸಿದ ಕೆಲವು ಅಡೆತಡೆಗಳು ಈ ಕೆಳಗಿನಂತಿವೆ:

1. ಶಾಲಾ ಆಡಳಿತಗಳು/ಶಿಕ್ಷಕರು ಮತ್ತು ಸಮಾಜದ ಅತ್ಯಂತ ಕೆಳಸ್ತರಗಳಿಂದ ಬಂದ ಕಲಿಕಾರ್ಥಿಗಳ ನಡುವಿನ ಸಾಮಾಜಿಕ ಅಂತರ.
2. ಶಿಕ್ಷಕರ ನಂಬಿಕೆಗಳು ಮತ್ತು ವಿದ್ಯಾರ್ಥಿಗಳ ಕುರಿತಾದ ಅವರ ಪರಿಕಲ್ಪನೆಗಳಿಂದ ಪುನರ್ಬಲನಗೊಂಡ ಕಲಿಕಾರ್ಥಿಗಳು ಮತ್ತು ಅವರ ಸಮುದಾಯಗಳಲ್ಲಿನ ಕೀಳರಿಮೆ.
3. ಶಾಲೆಗೆ ಹೋಗುವ ಕಿರಿಯ ಮಕ್ಕಳ ತರಗತಿಗಳು ಇನ್ನೂ ಶುಷ್ಕವೆನಿಸುವ, ದ್ವೇಷ ಹುಟ್ಟಿಸುವಂತಹ ಅಥವಾ ಹೆದರಿಕೆ ಹುಟ್ಟಿಸುವಂತಹ ಸ್ಥಿತಿಯಲ್ಲಿರುವುದು.
4. ಮನೆಯಿಂದ ಶಾಲೆಗೆ ಸ್ಥಿತ್ಯಂತರಗೊಳ್ಳುವ ಸಂದರ್ಭದಲ್ಲಿ ಮೌಖಿಕ ಸಂವಹನದಿಂದ ಚಿತ್ರ ಮತ್ತು ಮುದ್ರಣ ರೂಪಗಳಿಗೆ ಬದಲಾಗುವ ವಿಷಯದಲ್ಲಿ ಹಾಗೂ ಕಲಿಕಾರ್ಥಿಗಳು ತಮ್ಮ ಪರಿಚಿತ ಮನೆಯ ಭಾಷೆಗಳಿಂದ ತರಗತಿಯಲ್ಲಿ ಬೋಧನೆಗೆ ಬಳಸುವ ಭಾಷೆಗೆ ಬದಲಾಗುವ ಸಂದರ್ಭದ ಸವಾಲುಗಳು.
5. ಕನಿಷ್ಠ ಪರಿಕಲ್ಪನಾತ್ಮಕ ಗ್ರಹಿಕೆಯಿಂದ ಕೂಡಿದ್ದು ಚಿಂತನೆ, ಸಕ್ರಿಯ ಮತ್ತು ಅರ್ಥಪೂರ್ಣ ಕಲಿಕೆಗೆ ಅವಕಾಶವಿಲ್ಲದ ಯಾಂತ್ರಿಕ ಕಲಿಕಾ ವಿಧಾನಗಳಿಂದ ಕೂಡಿದ ತರಗತಿಗಳು.
6. ಉನ್ನತ ಶ್ರೇಣಿಯ ಕೌಶಲಗಳನ್ನು ಬೆಳೆಸಲು ಅಗತ್ಯವಾದ ಸಂವಹನಾತ್ಮಕ ಬೋಧನಾ ವಿಧಾನಗಳನ್ನು ಹೊಂದುವಲ್ಲಿ ವಿಫಲವಾದ ಶಿಕ್ಷಕರು ಮತ್ತು ಮಕ್ಕಳನ್ನು ಕ್ರಿಯಾಶೀಲವಾಗಿ

ತೊಡಗಿಸಲು ಹಾಗೂ ಕಲಿಕಾ ವಿಷಯದಲ್ಲಿ ಮಕ್ಕಳನ್ನು ಅರ್ಥಪೂರ್ಣವಾಗಿ ತೊಡಗಿಸುವ ತರಗತಿ ನಿರ್ವಹಣಾ ಕೌಶಲಗಳು ಇಲ್ಲದಿರುವುದು.

7. "ಒಂದು ಅಳತೆ ಎಲ್ಲರಿಗೂ ಹೊಂದುತ್ತದೆ" ಎಂಬ ಸಾಮಾನ್ಯ ಸನ್ನಿವೇಶಗಳನ್ನು ಆಧರಿಸಿದ ಪೂರ್ವ ನಿರ್ಧಾರಿತ ಕಲಿಕಾ ವಸ್ತು ಮತ್ತು ಕಲಿಕಾರ್ಥಿಗಳ ಪ್ರಗತಿಯನ್ನು ಅಳೆಯುವ ಮಾನದಂಡಗಳು ಬಹುತೇಕ ಸಂದರ್ಭದಲ್ಲಿ ಕಲಿಕಾರ್ಥಿಗಳ ಅಗತ್ಯಗಳ ಜೊತೆ ಹೊಂದಾಣಿಕೆಯಾಗದಿರುವುದು.

**ಮೂರು ಕವಲು ವಿಧಾನ**

ಚಿತ್ರ 1 ರಲ್ಲಿ ಮೂರು-ಕವಲು ವಿಧಾನದ ಪ್ರಮುಖ ಲಕ್ಷಣಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

**ಒಇಎಲ್‌ಪಿ ಯ ಮೂರು-ಕವಲು ವಿಧಾನ**

**ಕಲಿಕೆಯ ಸನ್ನಿವೇಶಗಳು**

**ಓದುವ/ಬರೆಯುವ ಕೌಶಲ್ಯಗಳನ್ನು ಬೆಳೆಸುವುದು**

**ಓದುವ ಸಂಸ್ಕೃತಿಯನ್ನು ಬೆಳೆಸುವುದು**

*ಚಿತ್ರ 1:* **ಒಇಎಲ್‌ಪಿ ಯ ವಿಧಾನ**

**ಎ. ತರಗತಿಯೊಳಗೆ ಕಲಿಕೆಗೆ ಪೂರಕವಾದ ಸನ್ನಿವೇಶವನ್ನು ನಿರ್ಮಿಸುವುದು**

ಎಲ್ಲ ಕಲಿಕೆಗೂ ಬುನಾದಿಯಾಗಿರುವುದರಿಂದ ಇದು ಆದ್ಯತೆಯ ವಿಷಯವಾಗಿದ್ದು ಒಇಎಲ್‌ಪಿ ಯ ಪ್ರಯತ್ನಗಳು ಈ ಅಂಶವನ್ನು ಆಧರಿಸಿ ವಿಕಾಸಗೊಂಡಿವೆ.

- ಬಹುಸ್ತರದ ತರಗತಿಗಳನ್ನು ನಿಭಾಯಿಸಲು ಎಲ್ಲರನ್ನೂ ಒಳಗೊಂಡು, ಸಕ್ರಿಯವಾಗಿ ಮತ್ತು ಸ್ವತಂತ್ರವಾಗಿ ತರಗತಿ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುವಂತಹ ಪರಿಣಾಮಕಾರಿ ತರಗತಿ ನಿರ್ವಹಣಾ ತಂತ್ರಗಳಿಂದ ಶಿಕ್ಷಕರನ್ನು ಸಿದ್ಧಗೊಳಿಸುವುದು.
- ಮಕ್ಕಳಿಗೆ ನಮ್ಮ ನೈಜ ಜಗತ್ತಿನ ಅನುಭವಗಳು ಮತ್ತು ಮನೆಯ ಭಾಷೆಗಳನ್ನು ತರಗತಿಯೊಳಕ್ಕೆ ತರುವ ಅವಕಾಶಗಳನ್ನು ಮಾಡಿಕೊಡುವುದು.
- ಭಯರಹಿತ ತರಗತಿ ವಾತಾವರಣವನ್ನು ನಿರ್ಮಿಸಲು ಶಿಕ್ಷಕರನ್ನು ಸಿದ್ಧಗೊಳಿಸುವುದು.

- ಪ್ರತಿಯೊಂದು ಮಗು ಯಶಸ್ಸು ಸಾಧಿಸಲು ಸಾಧ್ಯವಾಗುವ ಹಾಗೆ ಮಕ್ಕಳನ್ನು ಗಮನಿಸಿ ಅವರ ವೈಯಕ್ತಿಕ ಅಗತ್ಯಗಳಿಗೆ ಪೂರಕವಾಗಿ ಸ್ಪಂದಿಸಲು ಶಿಕ್ಷಕರನ್ನು ಸಿದ್ಧಗೊಳಿಸುವುದು.
- ತರಗತಿಯಲ್ಲಿ ಸಾಕ್ಷರತೆಗೆ ಪೂರಕವಾಗುವ ಸಮೃದ್ಧ ಸಂಪನ್ಮೂಲಗಳಿಂದ ಕೂಡಿದ ವಾತಾವರಣವನ್ನು ಬಹಳ ಎಚ್ಚರಿಕೆಯಿಂದ ನಿರ್ಮಿಸುವುದು.
- ತರಗತಿಯಲ್ಲಿನ ಸಾಕ್ಷರತಾ ಪೂರಕ ವಾತಾವರಣವನ್ನು ಪರಿಣಾಮಕಾರಿಯಾಗಿ ಹಲವು ರೀತಿಯಲ್ಲಿ ಬಳಸುವ ಹಾಗೆ ಶಿಕ್ಷಕರನ್ನು ಸಿದ್ಧಗೊಳಿಸುವುದು. ಈ ಮೂಲಕ ಮಕ್ಕಳ ಕಲಿಕಾಮಟ್ಟ ಮತ್ತು ಆಸಕ್ತಿಗಳನ್ನು ಹಾಗೂ ಚಿಂತನಾ ಕೌಶಲ ಹಾಗೂ ಕಲಿಕೆಯನ್ನು ಉತ್ತೇಜಿಸುವುದು.
- ಸಮೃದ್ಧ ಮಕ್ಕಳ ಸಾಹಿತ್ಯವು ವಿದ್ಯಾರ್ಥಿಗಳಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವುದು.
- ಪರಸ್ಪರ ಗೌರವ ಮತ್ತು ಸಹಕಾರವನ್ನು ಆಧರಿಸಿದ, ಆಯ್ಕೆಗೆ ಅವಕಾಶವಿರುವ ಮತ್ತು ನಿರ್ದಿಷ್ಟ ವಿನ್ಯಾಸ ಹೊಂದಿದ ಹಾಗೂ ಮುಕ್ತ ಮತ್ತು ನಿಯಂತ್ರಿತ ಚಟುವಟಿಕೆಗಳ ನಡುವೆ ಸಮತೋಲನ ಸಾಧಿಸುವುದು.
- ತರಗತಿಯ ಕಲಿಕಾ ವಾತಾವರಣ ಮತ್ತು ಕಲಿಕಾ ಪ್ರಕ್ರಿಯೆಯನ್ನು ಪರಿಶೀಲಿಸಲು ಅಗತ್ಯ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು.

**ಬಿ. ಓದುವ/ಬರೆಯುವ ಕೌಶಲ್ಯಗಳನ್ನು ಬೆಳೆಸುವುದು.**

ಈ ಅಂಶವು ಈ ಕೆಳಗಿನ ಕೌಶಲ್ಯಗಳನ್ನು ಬೆಳೆಸುವ ಉದ್ದೇಶದಿಂದ ವಿನ್ಯಾಸಗೊಳಿಸಿದ ಕಾರ್ಯಕ್ರಮಗಳನ್ನು ಹೊಂದಿದೆ.

I. ಬುನಾದಿ ಕೌಶಲಗಳು

II. ಉನ್ನತ ಕ್ರಮಾಂಕದ ಕೌಶಲ್ಯಗಳು.

ಇವುಗಳನ್ನು ಒಂದು ಅನುಕ್ರಮದಲ್ಲಿ ಕೈಗೊಳ್ಳುವ ಬದಲು ಸಾಂದರ್ಭಿಕವಾಗಿ ಏಕಕಾಲದಲ್ಲಿ ಸಾಧಿಸಲು ಪ್ರಯತ್ನಿಸಲಾಗಿದೆ.

**I. ಬುನಾದಿ ಕೌಶಲ್ಯಗಳು**

a) ಶಾಲಾ ಆಧರಿತ ಕಲಿಕೆಗೆ ಅಗತ್ಯವಾದ ಕೌಶಲ್ಯಗಳು- ಶಾಲೆಗೆ ಹೊಸತಾಗಿ ಬಂದ ಮಕ್ಕಳನ್ನು ಪರಿಚಿತ ಅನೌಪಚಾರಿಕ ಮನೆಯ ವಾತಾವರಣದಿಂದ ಶಾಲೆ ಮತ್ತು ತರಗತಿಯಲ್ಲಿನ ಹೆಚ್ಚು ಔಪಚಾರಿಕ ಹಾಗೂ ನಿಯಮ ಪಾಲನಾ ವಾತಾವರಣಕ್ಕೆ ಸರಾಗವಾಗಿ ಸ್ಥಿತ್ಯಂತರಗೊಂಡು ಹೊಂದಿಕೊಳ್ಳಲು ಸಿದ್ಧಪಡಿಸುವುದು.

b) ಲಿಖಿತ ಲಿಪಿಯೊಂದಿಗೆ ಅರ್ಥಪೂರ್ಣವಾಗಿ ಮಕ್ಕಳನ್ನು ತೊಡಗಿಸಲು ಅಗತ್ಯವಾದ ಅರ್ಥಪೂರ್ಣ ಓದುವಿಕೆ ಮತ್ತು ಬರವಣಿಗೆ ಕೌಶಲಗಳನ್ನು ಬೆಳೆಸುವುದು. ನಮ್ಮ ಸಂದರ್ಭದಲ್ಲಿ ದೇವನಾಗರಿ ಲಿಪಿಯಲ್ಲಿನ ಓದು ಮತ್ತು ಬರವಣಿಗೆಗೆ ಒತ್ತು ನೀಡಲಾಯಿತು. ಕಾರ್ಯಕ್ರಮದ ಈ ಘಟಕದ ಉದ್ದೇಶವೆಂದರೆ ವಿದ್ಯಾರ್ಥಿಗಳಿಗೆ ಯೋಜಿತ, ಸಾಮರ್ಥ್ಯಾಧಾರಿತ ಅವಕಾಶಗಳನ್ನು ನೀಡಿ ಮಕ್ಕಳು ಪರಿಣಾಮಕಾರಿಯಾಗಿ ಮತ್ತು ಏಕಕಾಲದಲ್ಲಿ ಸಂಕೇತ ಗ್ರಹಿಕೆ ಹಾಗೂ ಅರ್ಥಕಟ್ಟಿಕೊಳ್ಳುವ ಅಗತ್ಯ ಒಳಪ್ರಕ್ರಿಯೆಗಳಿಂದ ಕೂಡಿದ ಧ್ವನಿಶಾಸ್ತ್ರ ಪ್ರಕ್ರಿಯೆಯಲ್ಲಿ ಸಹಜವಾಗಿ ಒಳಗಾಗಿ ನಿರೀಕ್ಷಿತ ಸಾಮರ್ಥ್ಯ ಗಳಿಸುವಂತೆ ಮಾಡಲು ಒತ್ತು ನೀಡುವುದು. ಒಇಎಲ್‌ಪಿ ಯ ಪ್ರಯತ್ನಗಳು ಸಂಕೇತ ಗ್ರಹಿಕೆ ಪ್ರಕ್ರಿಯೆಯು ಅರ್ಥಪೂರ್ಣವಾಗಿರುವಂತೆ ಮಾಡಲು ಹೆಚ್ಚಿನ ಒತ್ತು ನೀಡುತ್ತದೆ. ನಾವು ಬಳಸಿದ ವಿಧಾನಗಳು ಮಾರ್ವಾರಿ, ಭೋಜಪುರಿ, ಮಾಲ್ವಿ, ಬೆಂಗಾಲಿ, ಪಂಜಾಬಿ… ಹೀಗೆ ವಿಭಿನ್ನ ಮನೆ ಭಾಷೆಗಳನ್ನು ಹೊಂದಿರುವ ಮಕ್ಕಳ ಅಗತ್ಯತೆಯನ್ನು ಪೂರೈಸುವಲ್ಲಿ ಸಮರ್ಥಗೊಳಿಸಿದವು. ದುರ್ಬಲ ಸಾಮಾಜಿಕ ಹಿನ್ನೆಲೆಯಿಂದ ಬರುವ ಮೊದಲ ತಲೆಮಾರಿನ ಕಲಿಕಾರ್ಥಿಗಳು ಮೌಖಿಕದಿಂದ ಮುದ್ರಿತ ಹಾಗೂ ಮನೆ ಭಾಷೆಯಿಂದ ಶಾಲಾ ಭಾಷೆಗೆ ಸ್ಥಿತ್ಯಂತರ ಹೊಂದುವಲ್ಲಿನ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಲು ಸೂಕ್ತವಾದ ಸಮಗ್ರ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸಲು ನಾವು ಪ್ರಯತ್ನಿಸಿದೆವು. ಈ ಕಾರ್ಯಕ್ರಮವು ಎಂಟು ವರ್ಷಗಳ ಕಾಲ ತರಗತಿಯಲ್ಲಿ ಆಳವಾಗಿ ತೊಡಗಿಕೊಂಡು ಗಳಿಸಿದ ಅನುಭವಗಳಿಂದ ಅಭಿವೃದ್ಧಿಗೊಂಡಿದೆ.

**II. ಉನ್ನತ ಕ್ರಮಾಂಕದ ಕೌಶಲ್ಯಗಳು**

ಈ ಅಂಶವನ್ನು ನಾವು ಮುಂದೆ ವಿಭಾಗದಲ್ಲಿ ನೋಡಲಿದ್ದೇವೆ. (ತರಗತಿ ಬೋಧನಾ ವಿಧಾನಗಳು)

**ಸಿ. ಓದುವ ಸಂಸ್ಕೃತಿಯನ್ನು ಬೆಳೆಸುವುದು**

ಪ್ರತಿ ತರಗತಿಯಲ್ಲಿನ ಓದುವ ಕಾರ್ನರ್ ಮತ್ತು ಗ್ರಾಮದಲ್ಲಿನ ಗ್ರಂಥಾಲಯಗಳಲ್ಲಿ ಸಮೃದ್ಧ ಮಕ್ಕಳ ಸಾಹಿತ್ಯದ ಲಭ್ಯತೆ ಮತ್ತೆ ಬಳಕೆಯ ಮೂಲಕ ಇದನ್ನು ಸಾಧಿಸಲಾಗಿದ್ದು ಇದರಲ್ಲಿ ಗಟ್ಟಿ ಓದು, ವಿನಿಮಯ ಓದು, ನಿರ್ದೇಶಿತ ಓದು ಮತ್ತು ಸ್ವತಂತ್ರ ಓದು ಮುಂತಾದ ಪರಿಣಾಮಕಾರಿ ಓದಿನ ವಿಧಾನಗಳ ಬಳಕೆಗೆ ಒತ್ತು ನೀಡಲಾಯಿತು.

**ಪ್ರಮುಖ ಕಾರ್ಯಕ್ರಮಗಳು**

**ಎ. ಆರಂಭಿಕ ಸಾಕ್ಷರತಾ ಕಾರ್ಯಕ್ರಮ**

1) 1 ಮತ್ತು 2 ನೇ ತರಗತಿಗಳಿಗೆ ಎರಡು ವರ್ಷಗಳ ಬುನಾದಿ ಕಾರ್ಯಕ್ರಮ

- 1 ನೇ ತರಗತಿಯ ಬುನಾದಿ ಕಾರ್ಯಕ್ರಮವನ್ನು ವಿಷಯಾಧಾರಿತವಾಗಿ ವಿನ್ಯಾಸಗೊಳಿಸಿದ್ದು ಇದು ಗಟ್ಟಿ ಓದು ಹಾಗೂ ಪ್ರತಿ ವಿಷಯದೊಂದಿಗೆ ಸಮನ್ವಯಗೊಳಿಸಿದ ಪದ ಪರಿಚಯ ಚಟುವಟಿಕೆಗಳನ್ನು ಒಳಗೊಂಡಿದೆ.
- 2 ನೇ ತರಗತಿಯ ಘಟಕಗಳನ್ನು ಮಕ್ಕಳ ಸಾಹಿತ್ಯದ ಜೊತೆಗೆ ಪಠ್ಯ ಸಾಮಗ್ರಿಗಳನ್ನು ಸಂಯೋಜಿಸಿ ವಿನ್ಯಾಸಗೊಳಿಸಲಾಗಿದೆ.

2) 3 ರಿಂದ 5 ನೇ ತರಗತಿಗಳಿಗೆ ಪರಿಹಾರ ಬೋಧನಾ ಕಾರ್ಯಕ್ರಮ

ಇದು ಸಾಮರ್ಥ್ಯಾಧಾರಿತ ಕಾರ್ಯಕ್ರಮವಾಗಿದ್ದು ಇದನ್ನು ಸಮುದಾಯ ಆಧಾರಿತ ಕಲಿಕಾ ಕೇಂದ್ರಗಳ ಮೂಲಕ ಮಕ್ಕಳಿಗೆ ಅಗತ್ಯ ನೆರವು ನೀಡಿ ಮುಖ್ಯವಾಹಿನಿಗೆ ತರುವ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ.

**ಬಿ. ಓದುವ ಕಾರ್ಯಕ್ರಮ**

ಇದನ್ನು ತರಗತಿಗಳಲ್ಲಿನ 'ಓದುವ ಕಾರ್ನರ್' ಮತ್ತು ಹಳ್ಳಿಗಳ ನಡುವೆ ಗ್ರಂಥಾಲಯಗಳ ಜಾಲವನ್ನು ರಚಿಸುವ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು ಇದರಲ್ಲಿ ಓದುವ ಸಂಸ್ಕೃತಿಯನ್ನು ಬೆಳೆಸಲು ಒತ್ತು ನೀಡಲಾಗುತ್ತಿದೆ.

**ಒಇಎಲ್‌ಪಿ ಯ ಪರಿಕಲ್ಪನಾತ್ಮಕ ಗ್ರಹಿಕೆಯನ್ನು ವೃತ್ತಿನಿರತರಿಗೆ ವರ್ಗಾಯಿಸುವುದು.**

ಸಂಶೋಧನಾ ಸಾಹಿತ್ಯ ಮತ್ತು ಒಇಎಲ್‌ಪಿ ಯ ಮೂಲಕ ನಿರಂತರ ಕ್ಷೇತ್ರ ಅನುಭವದಿಂದ ಒಳನೋಟಗಳನ್ನು ಪಡೆದ ನಾವು ಸಾಕ್ಷರರಾಗುವುದೆಂದರೆ ಕೇವಲ ವರ್ಣಮಾಲೆಯ ಕಲಿಕೆ ಅಥವಾ

ಓದುವ ಸಾಮರ್ಥ್ಯ ಪಡೆಯುವುದು ಅಥವಾ ಬರೆಯುವುದು ಮತ್ತು ನಿಗದಿಪಡಿಸಿದ ಪಠ್ಯಗಳಿಗೆ ಪ್ರತಿಕ್ರಿಯಿಸುವುದಕ್ಕೆ ಸೀಮಿತಗೊಳಿಸುವುದು ಸರಿಯಲ್ಲ ಎಂದು ನಂಬುತ್ತೇವೆ.

ನಮ್ಮ ಪ್ರಕಾರ ಸಾಕ್ಷರರಾಗುವುದು ಎಂದರೆ:

- ಸ್ವತಂತ್ರವಾಗಿ ಆಲೋಚಿಸಲು ಸಮರ್ಥವಾಗುವುದು.
- ತಾನು ನೋಡಿದ, ಕೇಳಿದ ಅಥವಾ ಓದಿದ ಸಂಗತಿಗಳನ್ನು ಅರ್ಥಮಾಡಿಕೊಳ್ಳುವುದು.
- ತನ್ನ ವಿಚಾರಗಳು, ಚಿಂತನೆಗಳು ಮತ್ತು ಭಾವನೆಗಳನ್ನು ಮೌಖಿಕ, ಚಿತ್ರ ಅಥವಾ ಲಿಖಿತ ಸಂವಹನದ ಮೂಲಕ ಹಂಚಿಕೊಳ್ಳುವುದು.

ಈ ವಿಚಾರಗಳನ್ನು ಶಿಕ್ಷಕರು ಮತ್ತಿತರ ವೃತ್ತಿನಿರತರಿಗೆ ಚಿತ್ರದ ಮೂಲಕ ಸ್ಪಷ್ಟವಾಗಿ ಮತ್ತು ಸುಲಭವಾಗಿ ಅರ್ಥವಾಗುವಂತೆ 'ಒಇಎಲ್‌ಪಿ ಹಸ್ತ' ರೂಪದಲ್ಲಿ (ಚಿತ್ರ 2) ಪ್ರಸ್ತುತಪಡಿಸಲಾಗುತ್ತದೆ. ಚಿತ್ರವನ್ನು ಗಮನಿಸಿ.

**ಚಿಂತನೆ**

**ಆಲಿಸುವಿಕೆ**

**ಮಾತನಾಡುವಿಕೆ**

**ಓದುವಿಕೆ**

**ಬರೆಯುವಿಕೆ**

***ಚಿತ್ರ 2:*** **ಒಇಎಲ್‌ಪಿ ಯ ಓದು/ಬರಹದ ಹಸ್ತ**

ಹಸ್ತದ ಇತರ ನಾಲ್ಕು ಬೆರಳುಗಳ ಕಾರ್ಯನಿರ್ವಹಣೆಯನ್ನು ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಹೆಬ್ಬೆರಳಿನ ಪ್ರಮುಖ ಪಾತ್ರವನ್ನು ವಿವರಿಸುವುದಕ್ಕೆ ಸಮಾನಾಂತರವಾಗಿ ಭಾಷೆ ಮತ್ತು ಸಾಕ್ಷರತೆಯ ನಾಲ್ಕು ಘಟಕಗಳಾದ ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ ಮತ್ತು ಬರೆಯುವಿಕೆಗಳನ್ನು ಅರ್ಥಪೂರ್ಣವಾಗಿ ರೂಢಿಸಿಕೊಳ್ಳಲು ಚಿಂತನೆ (ಆಲೋಚನೆ)ಯ ಪ್ರಮುಖ ಪಾತ್ರವನ್ನು ವಿವರಣೆಯ ಮೂಲಕ ಶಿಕ್ಷಕರು ಅರ್ಥಮಾಡಿಕೊಳ್ಳಲು ಸಹಾಯ ಮಾಡಲಾಗುವುದು. ಇನ್ನೊಂದು ರೀತಿ ಹೇಳುವುದಾದರೆ ಭಾಷೆ ಮತ್ತು ಸಾಕ್ಷರತೆಯ ಈ ನಾಲ್ಕು ಅಂಶಗಳು ಸಕ್ರಿಯವಾಗಿ

ಅರ್ಥಪೂರ್ಣಗೊಳಿಸುವುದು ಅವುಗಳನ್ನು ಪ್ರಜ್ಞಾಪೂರ್ವಕವಾಗಿ 'ಚಿಂತನೆ'ಯೊಂದಿಗೆ ಯೋಜಿಸಿ ಸಂಬಂಧ ಕಲ್ಪಿಸುವ ಮೂಲಕ ಮಾತ್ರ ಸಾಧ್ಯ. ಈ ವಿಚಾರಗಳನ್ನು ಒಇಎಲ್‌ಪಿ ಯಲ್ಲಿ ಪರಿಣಾಮಕಾರಿಯಾಗಿ ಬಳಸಿ ಗ್ರಾಮೀಣ ಪ್ರದೇಶಗಳ ಶಿಕ್ಷಕರಿಗೆ ಕೇವಲ ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ ಮತ್ತು ಬರೆಯುವ ಚಟುವಟಿಕೆಗಳನ್ನು ತರಗತಿ ಪ್ರಕ್ರಿಯೆಯಲ್ಲಿ ಬಳಸುವುದರಿಂದ ಮಕ್ಕಳಲ್ಲಿ ಸಾಕ್ಷರತೆಯನ್ನು ಸಮರ್ಪಕವಾಗಿ ಬೆಳೆಸಲು ಸಾಧ್ಯವಿಲ್ಲ ಎಂಬ ಅಂಶವನ್ನು ಅರ್ಥಮಾಡಿಸಲು ಪ್ರಯತ್ನಿಸಲಾಯಿತು. ಮಕ್ಕಳು ತಮ್ಮದೇ ಮಾತುಗಳಲ್ಲಿ ಕಾರಣೀಕರಿಸುವ, ಚಿಂತಿಸುವ, ತೀರ್ಮಾನ ಕೈಗೊಳ್ಳುವ, ಕಲ್ಪಿಸಿಕೊಳ್ಳುವ, ಪ್ರಶ್ನಿಸುವ ಮತ್ತು ವಿವರಿಸುವ ಅವಕಾಶಗಳನ್ನು ನಾವು ವ್ಯವಸ್ಥಿತವಾಗಿ ಯೋಜಿಸಿ, ನೈಜ ಅವಕಾಶಗಳನ್ನು ಒದಗಿಸಿದಾಗ ಮಾತ್ರ ಅರ್ಥಪೂರ್ಣ ಭಾಷೆ ಮತ್ತು ಸಾಕ್ಷರತೆಯ ಕಲಿಕೆಯು ಸಾಧ್ಯವಾಗುತ್ತದೆ. ಕಾರ್ಯಕ್ರಮದ ವ್ಯಾಪ್ತಿಯೊಳಗೆ ಒಂದನೇ ತರಗತಿಯ ಹಂತದಲ್ಲಿಯೇ ಇಂತಹ ಯೋಜಿತ ಅವಕಾಶಗಳನ್ನು ಒದಗಿಸಿ ಮಕ್ಕಳಲ್ಲಿ ಉನ್ನತ ಕ್ರಮಾಂಕದ ಚಿಂತನಾ ಕೌಶಲ್ಯಗಳನ್ನು ಬೆಳೆಸಲು ಸಹಾಯವಾಗುವಂತೆ ಶಿಕ್ಷಕರನ್ನು ಸಿದ್ಧಗೊಳಿಸಲಾಗುತ್ತಿದೆ. ಇದನ್ನು ಸಾಧಿಸಲು, ತರಗತಿ ಪ್ರಕ್ರಿಯೆಗಳನ್ನು ಚಿತ್ರೀಕರಿಸಿ, ತಿಂಗಳ ಯೋಜನಾ ಸಭೆ ಮತ್ತು ಪರಿಶೀಲನಾ ಸಭೆಗಳಲ್ಲಿ ಅಥವಾ ಸಾಮರ್ಥ್ಯಾಭಿವೃದ್ಧಿ ಕಾರ್ಯಾಗಾರಗಳಲ್ಲಿ ಚರ್ಚಿಸಲಾಗುತ್ತದೆ. ಮಕ್ಕಳ ಸ್ವಾಭಾವಿಕ ಭಾಷಾ ಕಲಿಕೆ ಪ್ರಕ್ರಿಯೆಯನ್ನು ಕುರಿತು ಚಿಂತಿಸುವಂತೆ ಶಿಕ್ಷಕರನ್ನು ಪ್ರೋತ್ಸಾಹಿಸುವ ಜೊತೆಗೆ ತರಗತಿ ಪ್ರಕ್ರಿಯೆಯನ್ನು ರೂಪಿಸುವಲ್ಲಿ ಅದರ ಪರಿಣಾಮಗಳನ್ನು ಕುರಿತು ಚರ್ಚಿಸಿ ನಿಧಾನವಾಗಿ ಮತ್ತು ನಿರಂತರವಾಗಿ ಸಿದ್ಧಗೊಳಿಸಲಾಗುತ್ತದೆ. ಮಕ್ಕಳ ವೈವಿಧ್ಯಮಯ ಮೌಖಿಕ ಭಾಷಾ ಸಂಪನ್ಮೂಲಗಳು, ಅವರ ಅನುಭವಗಳು, ಕಲ್ಪನೆ, ಭಾವನೆಗಳು ಮತ್ತು ಕುತೂಹಲಗಳಿಗೆ ಒತ್ತು ನೀಡುವುದರ ಅಗತ್ಯವನ್ನು ಶಿಕ್ಷಕರಿಗೆ ಮನವರಿಕೆ ಮಾಡಿಕೊಟ್ಟು ಪ್ರತಿಯೊಂದು ಮಗುವಿನ ಭಾಷೆ ಮತ್ತು ಸಾಕ್ಷರತೆಯ ಕಲಿಕೆಯು ಉದ್ದೇಶಪೂರ್ವಕ ಮತ್ತು ಅರ್ಥಪೂರ್ಣವಾಗುವ ಹಾಗೆ ಮಾಡಲು ಪ್ರಯತ್ನಿಸಲಾಗುತ್ತಿದೆ.

**ತರಗತಿ ವಿಧಾನಗಳು**

ಈ ಪರಿಕಲ್ಪನಾತ್ಮಕ ಅರಿವನ್ನು ತರಗತಿ ಪ್ರಕ್ರಿಯೆಯಾಗಿ ಪರಿವರ್ತಿಸಲು ನಾಲ್ಕು ಘಟಕಗಳ ವಿಧಾನವನ್ನು ಒಇಎಲ್‌ಪಿ ಯು ಬಳಸುತ್ತದೆ. ನಾಲ್ಕು ಘಟಕಗಳ ವಿಧಾನವು ಡಾ. ಪೆಟ್ರೀಸಿಯಾ ಕನ್ನಿಂಗ್‌ಹ್ಯಾಂ ಮತ್ತು ಡಾ. ಡೊರೊತಿ ಹಾಲ್ ರವರು 1980 ರ ದಶಕದಲ್ಲಿ ರಚಿಸಿದ ಸಮತೋಲಿತ ಸಾಕ್ಷರತಾ ಚೌಕಟ್ಟಾಗಿದೆ. ಈ ನಾಲ್ಕು ಘಟಕಗಳು ಮಕ್ಕಳಲ್ಲಿ ಓದುವಿಕೆ, ಬರವಣಿಗೆ, ಮಾತನಾಡುವಿಕೆ ಮತ್ತು ಆಲಿಸುವಿಕೆ ಕೌಶಲ್ಯಗಳನ್ನು ಬೆಳೆಸುವ ಮೂಲಕ ಅವರನ್ನು ಪರಿಣಾಮಕಾರಿ ಸಾಕ್ಷರತಾ ಸಂವಹನಕಾರರನ್ನಾಗಿ ರೂಪಿಸಲು ಸಹಾಯಕವಾಗುತ್ತವೆ. ಶಿಕ್ಷಕರಿಗೆ ಇದೊಂದು ಪರಿಣಾಮಕಾರಿ ಬೋಧನಾ ವ್ಯವಸ್ಥೆಯಾಗಿದ್ದು ಇದು “ಬೋಧನೆಯಲ್ಲಿ ಏನು” ಎನ್ನುವುದಕ್ಕಷ್ಟೇ ಅಲ್ಲದೆ “ಹೇಗೆ” ಎನ್ನುವುದಕ್ಕೂ ಒತ್ತು ನೀಡುತ್ತದೆ. ಈ 'ನಾಲ್ಕು ಘಟಕಗಳು' ವಿಧಾನವು ಬೋಧನೆಯನ್ನು ಹೆಚ್ಚು ಪರಿಣಾಮಕಾರಿ ಮತ್ತು ಸಮರ್ಥಗೊಳಿಸುವ ಜೊತೆಗೆ ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ತಮ್ಮ ಅಮೂಲ್ಯವಾದ ಸಮಯವನ್ನು ಹೇಗೆ ಉತ್ತಮವಾಗಿ ನಿರ್ವಹಿಸಬೇಕು ಎಂದು ಮನದಟ್ಟು ಮಾಡಿಕೊಡುವಲ್ಲಿ ಯಶಸ್ವಿಯಾಗಿದೆ ಎಂದು ಸಂಶೋಧನೆಯು ದೃಢಪಡಿಸಿದೆ. ಈ ವಿಧಾನವನ್ನು ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯದ ಡಾ. ಶೈಲಜಾ ಮೆನನ್ ರವರು ಶಿಫಾರಸು ಮಾಡಿದ್ದು ಇದನ್ನು ಪ್ರಸ್ತುತ ಒಇಎಲ್‌ಪಿ ಯಲ್ಲಿ ನಮ್ಮ ಮೌಲ್ಯಮಾಪನದ ಅಗತ್ಯಗಳು ಮತ್ತು ಸಂದರ್ಭಕ್ಕೆ ಅನುಗುಣವಾಗಿ ಸುಧಾರಿತ ರೂಪದಲ್ಲಿ ಬಳಸಲಾಗುತ್ತಿದೆ. ಇದರ ಚಿತ್ರ ಈ ಕೆಳಗಿನಂತಿದೆ.

| **ದೈನಂದಿನ ಕಾರ್ಯಕ್ರಮ**<br>**4 ಘಟಕಗಳು (ಪ್ರತಿಯೊಂದಕ್ಕೂ 30 ನಿಮಿಷಗಳು)** | |
|---|---|
| **1. ಓದುವುದು ಮತ್ತು ಮಾತನಾಡುವ ಸಮಯ** | **2. ಪದ ಕಲಿಕೆ ಮತ್ತು ಪದಸಂಪತ್ತು** |
| **3. ಬರವಣಿಗೆ ಮತ್ತು ಅಭಿವ್ಯಕ್ತಿ** | **4. ಓದು/ಬರಹ ಕೌಶಲ್ಯ ಅಭಿವೃದ್ಧಿ** |

*ಚಿತ್ರ 3:* ನಾಲ್ಕು ಘಟಕಗಳ ವಿಧಾನ

**ಒಇಎಲ್‌ಪಿ ಯ ನಾಲ್ಕು ಘಟಕಗಳ ಸಂಕ್ಷಿಪ್ತ ನೋಟ**

ಪ್ರತಿಯೊಂದು ಘಟಕಕ್ಕೆ ನಿಗದಿಪಡಿಸಿರುವ ಸಮಯದ ಹಂಚಿಕೆಯಲ್ಲಿ ೧ ಮತ್ತು ೨ ನೇ ತರಗತಿಗಳ ನಿರ್ದಿಷ್ಟ ಅಗತ್ಯಗಳಿಗೆ ಅನುಗುಣವಾಗಿ ಕೆಲವು ಸಣ್ಣ ಪುಟ್ಟ ಬದಲಾವಣೆಗಳನ್ನು ನಮ್ಮ ಕಾರ್ಯಕ್ಷೇತ್ರದಲ್ಲಿ ಮಾಡಿಕೊಳ್ಳಲಾಗಿದೆ.

**ಘಟಕ 1: ಓದುವುದು ಮತ್ತು ಮಾತನಾಡುವ ಸಮಯ**

ಕಾಲಾವಧಿ - 30 ರಿಂದ 40 ನಿಮಿಷಗಳು

ಇದು ಸಂಭಾಷಣೆಗಳು, ಗಟ್ಟಿ ಓದು, ಕ್ರಮೇಣವಾಗಿ ಮಾರ್ಗದರ್ಶಿತ ಓದು, ಹಂಚಿಕೆ ಓದು ಮತ್ತು ಕೊನೆಗೆ ಸ್ವತಂತ್ರ ಓದುವ ಚಟುವಟಿಕೆಗಳನ್ನು ಒಳಗೊಂಡಿದೆ. ಓದುವ ಪೂರ್ವ, ಓದುವ ಸಂದರ್ಭ ಮತ್ತು ಓದಿನ ನಂತರ ಬಳಸಬಹುದಾದ ತಂತ್ರಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ ಹಾಗೂ ಇದು ಉನ್ನತ ಕ್ರಮಾಂಕದ ಚಿಂತನೆಯನ್ನು ಕಾರ್ಯಗತಗೊಳಿಸುವ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

**ಘಟಕ 2: ಪದ ಗುರುತಿಸುವಿಕೆ ಮತ್ತು ಪದಸಂಪತ್ತಿನ ಬೆಳವಣಿಗೆ**

ಕಾಲಾವಧಿ - 20 ನಿಮಿಷಗಳು

ಇದನ್ನು ವೈವಿಧ್ಯಮಯ ಚಟುವಟಿಕೆಗಳ ಮೂಲಕ ಸಾಧಿಸಲಾಗುತ್ತದೆ ಹಾಗೂ ಇದು ತರಗತಿಯಲ್ಲಿ ಮುದ್ರಣ ರೂಪದಲ್ಲಿ ಪ್ರದರ್ಶಿಸಬಹುದಾದ ಆಟಗಳನ್ನು ಒಳಗೊಂಡಿದೆ.

**ಘಟಕ 3: ಬರವಣಿಗೆ ಮತ್ತು ಸೃಜನಾತ್ಮಕ ಅಭಿವ್ಯಕ್ತಿಗಾಗಿ ಚಟುವಟಿಕೆಗಳು**

ಕಾಲಾವಧಿ - 30 ನಿಮಿಷಗಳು

ವಿದ್ಯಾರ್ಥಿಗಳು ತಮ್ಮ ವಿಚಾರಗಳನ್ನು ಸೃಜನಾತ್ಮಕವಾಗಿ ವ್ಯಕ್ತಗೊಳಿಸಲು ವೈವಿಧ್ಯಮಯ ಸ್ವಾಭಾವಿಕ ವಸ್ತುಗಳನ್ನು ಬಳಸಲು ಪ್ರೋತ್ಸಾಹಿಸಲಾಗುತ್ತದೆ.

**ಘಟಕ 4: ಕೌಶಲ್ಯ ಅಭಿವೃದ್ಧಿ**

ಕಾಲಾವಧಿ - 30 ನಿಮಿಷಗಳು

ಕೌಶಲ್ಯ ಅಭಿವೃದ್ಧಿ ಘಟಕವು ಮಕ್ಕಳಲ್ಲಿ ಬುನಾದಿ ಕೌಶಲ್ಯಗಳು (ಒಇಎಲ್‌ಪಿ ಯು ವಿನ್ಯಾಸಗೊಳಿಸಿದ ವಿಧಾನದ ಮೂಲಕ ಅರ್ಥಪೂರ್ಣ ಗ್ರಹಿಕೆಗೆ ಸಹಾಯಕವಾಗುತ್ತದೆ) ಮತ್ತು ಉನ್ನತ ಕ್ರಮಾಂಕದ ಚಿಂತನಾ ಕೌಶಲ್ಯಗಳು (ಪಠ್ಯಾಧಾರಿತ ವಸ್ತುಗಳನ್ನು ಆಧರಿಸಿದ ಯೋಜಿತ ಅಭ್ಯಾಸ ಹಾಳೆಗಳು ಮತ್ತು ವೈವಿಧ್ಯಮಯ ಚಟುವಟಿಕೆಗಳ ಮೂಲಕ) ಇವೆರಡನ್ನೂ ಬೆಳೆಸಲು ಒತ್ತು ನೀಡಲಾಗುತ್ತದೆ.

ಕಲಿಕಾರ್ಥಿಗಳ ಅನುಪಾಲನೆ ಮತ್ತು ಕಾರ್ಯಕ್ರಮ ಪರಿಶೀಲನೆಯ ವ್ಯವಸ್ಥೆಯನ್ನು ಈ ಮೇಲಿನ ಎರಡೂ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ವಿದ್ಯಾರ್ಥಿಗಳ ವೈಯಕ್ತಿಕ ಅನುಪಾಲನಾ ವ್ಯವಸ್ಥೆಯನ್ನು ಈ ಕೆಳಕಂಡ ಅಂಶಗಳ ಸಂಯೋಜನೆಯಿಂದ ರೂಪಿಸಲಾಗಿದೆ.

a) ಸಾಮರ್ಥ್ಯಾಧಾರಿತ ತ್ರೈಮಾಸಿಕ ಸಮಗ್ರ ಮೌಲ್ಯಮಾಪನ
b) ತರಗತಿ ವೀಕ್ಷಣೆಯ ಮೂಲಕ ತ್ರೈಮಾಸಿಕ ರೂಪಣಾತ್ಮಕ ಮೌಲ್ಯಮಾಪನ
c) ವಿದ್ಯಾರ್ಥಿಗಳ ವೈಯಕ್ತಿಕ ಕೃತಿ ಸಂಪುಟಗಳನ್ನು ಆಧರಿಸಿ ಅನುಪಾಲಿಸುವುದು

ಪ್ರಸ್ತುತ ನಾವು ಮೌಲ್ಯಮಾಪನ ಪ್ರಕ್ರಿಯೆಯನ್ನು ಇನ್ನಷ್ಟು ಸರಳೀಕರಿಸುವ ಪ್ರಯತ್ನದಲ್ಲಿ ನಿರತರಾಗಿದ್ದು ಇದರಿಂದ ವಿದ್ಯಾರ್ಥಿಗಳ ಪ್ರಗತಿಯ ಅನುಪಾಲನೆ ಮಾಡಲು ಇನ್ನೂ ಹೆಚ್ಚಿನ ಸಾಮರ್ಥ್ಯವನ್ನು ತರಲು ಸಾಧ್ಯವಾಗುತ್ತದೆ.

**ಉಪಸಂಹಾರ**

ಬೋಧನಾ ಪ್ರಕ್ರಿಯೆಗಳು ಆಳವಾಗಿ ಬೇರೂರಿ ಜಾರಿಯಲ್ಲಿರುವ ಹಳೆಯ ಅಭ್ಯಾಸಗಳು ಮತ್ತು ನಂಬಿಕೆಗಳ ವ್ಯವಸ್ಥೆಗೆ ಹಲವಾರು ಹೊಸ ಆರಂಭಿಕ ಸಾಕ್ಷರತಾ ಆಯಾಮಗಳು ಸವಾಲು ಎಸೆಯುತ್ತಿವೆ. ಬಹುತೇಕ ಸಂದರ್ಭಗಳಲ್ಲಿ ತಮ್ಮ ಹೊಸ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಶಿಕ್ಷಕರನ್ನು ಸಿದ್ಧಗೊಳಿಸದಿರುವುದು ಪ್ರಮುಖ ಕಾರಣವೆಂದು ಯಾವುದೇ ವಿವರಗಳ ಆಳಕ್ಕೆ ಹೋಗದೆ ಹೇಳಬಹುದಾಗಿದೆ. ಉದಾಹರಣೆಗೆ: ಮಕ್ಕಳನ್ನು ಅರ್ಥಪೂರ್ಣ ಮಾತುಕತೆಯಲ್ಲಿ ತೊಡಗುವಂತೆ ಮಾಡುವುದು, ಪ್ರಶ್ನಿಸುವುದು ಮತ್ತು ವಿವಿಧ ಗ್ರಹಿಕಾ ತಂತ್ರಗಳನ್ನು ಬಳಸುವುದು, ಪರಿಣಾಮಕಾರಿಯಾದ ಗಟ್ಟಿ ಓದು, ಮಾರ್ಗದರ್ಶಿತ ಓದು ಮತ್ತು ವಿನಿಮಯ ಓದು ಹಾಗೂ ಬರವಣಿಗೆ ಮುಂತಾದವು ಹೊಸ ಅಗತ್ಯಗಳಾಗಿದ್ದು ಇವು ಸಾಂಸ್ಕೃತಿಕವಾಗಿ ಹೊರಗಿನವಾಗಿದ್ದು, ಅಪರಿಚಿತ ಬೋಧನಾ ಅಭ್ಯಾಸಗಳಾಗಿವೆ ಹಾಗೂ ಇವು ತರಗತಿಯಲ್ಲಿ ಸಕ್ರಿಯ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಕಲಿಕಾರ್ಥಿಗಳ ಉದ್ದೇಶಪೂರ್ವಕ ಪಾತ್ರ ನಿರ್ವಹಣೆಗೆ ಒತ್ತು ನೀಡುತ್ತವೆ. ಇವು ಬಹಳಷ್ಟು ಶಿಕ್ಷಕರಿಗೆ ಆತಂಕ ಹುಟ್ಟಿಸುವ ಸಂಗತಿ ಎನಿಸಬಹುದು ಎಂದು ನಮ್ಮ ಅನುಭವ ಹೇಳುತ್ತದೆ. ತಮ್ಮ ಸುರಕ್ಷಿತ ವಲಯಗಳಿಗೆ ಧಕ್ಕೆಯಾಗುವುದೆಂಬ ಕಾರಣಕ್ಕೆ ಕೆಲವು ಪ್ರಶಿಕ್ಷಕರು ಈ ಚಿಂತನೆಗಳಿಗೆ ಪ್ರತಿರೋಧ ವ್ಯಕ್ತಪಡಿಸಿದ್ದಾರೆ. ಬಹಳಷ್ಟು ಬಾರಿ ಇದರಲ್ಲಿನ ಕೆಲವು ಗ್ರಹಿಕೆಗಳು ಮತ್ತು ತರಗತಿ ವಿಧಾನಗಳ

ಕುರಿತಾಗಿ ಬೋಧಕರಲ್ಲಿ ಸುರಕ್ಷಿತ ಭಾವನೆಯನ್ನು ಉಂಟುಮಾಡಲು ನಮಗೆ ಸಮಯ ಹಿಡಿಯಿತು. ಒಇಎಲ್‌ಪಿ ಯು ಪ್ರಸ್ತುತ ಈ ವಿಚಾರಗಳನ್ನು ಪರಿಚಯಾತ್ಮಕ ತರಬೇತಿ ಮಾಡ್ಯೂಲ್‌ಗಳು ಹಾಗೂ ದೃಕ್-ಶ್ರವಣ ತರಬೇತಿ ಸಂಚಿಗಳನ್ನು ನೈಜ ತರಗತಿ ಪ್ರಕ್ರಿಯೆಯ ವಿಡಿಯೋ ತುಣುಕುಗಳ ಮೂಲಕ ಮಾರ್ಗಗಳನ್ನು ಹಂಚಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ.

*[1]ಆರಂಭಿಕ ಸಾಕ್ಷರತಾ ಕ್ಷೇತ್ರದಲ್ಲಿ ಗಂಭೀರವಾಗಿ ತೊಡಗಿರುವ ತನ್ನ ಸಹಭಾಗಿಗಳ ಆಯ್ದ ತಂಡಗಳಿಗೆ ಸರ್ ರತನ್ ಟಾಟಾ ಟ್ರಸ್ಟ್ ಆರಂಭಿಸಿದ ಅರ್ಲಿ ಲಿಟರಸಿ (ಆರಂಭಿಕ ಸಾಕ್ಷರತೆ) ಕುರಿತಾದ ಎರಡು ಸಮಾಲೋಚನಾ ಸಭೆಯ ಚರ್ಚೆಗಳು ನಮ್ಮ ಈ ಪರಿಕಲ್ಪನಾತ್ಮಕ ಮತ್ತು ಒಇಎಲ್‌ಪಿ ಯ ಕಾರ್ಯಕ್ರಮವು ರೂಪುಗೊಳ್ಳುವಲ್ಲಿ ಬಹಳ ಪ್ರಯೋಜನಕಾರಿಯಾಗಿದ್ದು ನಾವು ಅವರಿಗೆ ನಮ್ಮ ಕೃತಜ್ಞತೆಗಳನ್ನು ಅರ್ಪಿಸಲು ಇಚ್ಛಿಸುತ್ತೇವೆ.*

***

## ಪರಾಮರ್ಶನ ಗ್ರಂಥಗಳು


- Bloome, D. & Dail, A. R. K. (1997). Toward (re) defining miscue analysis: Reading as a social and cultural process. *Language Arts*, 74 (8), 610-616.
- Donaldson, M. (1978). *Children’s minds*. London: Fontana paperbacks.
- Duke, N. K. & Pearson, D. P. (2002). Effective practices for developing reading comprehension. In A. E. Farstrup & S. J. Samuels (Eds.), *What research has to say about reading instruction* (3rd ed.) (pp. 205-242). Newark, DE: International Reading Association.
- Pearson, D. P. (2001). *Reading in the twentieth century*. CIERAArchive 01(08). Retrieved from www.ciera.org/library/archive/2001-08/ 0108pdp.pdf
- Street, B. V. (1984) *Literacy in theory and practice*. Cambridge: Cambridge University Press.
- The National Reading Panel. (2000). Teaching children to read: An evidence based assessment of scientific literature on reading and its implications for instruction. *National Institute of Health* Pub. No 00-4769. Retrieved from www.nichd.nih.gov/publications/pubs/ nrp/documents/report.pdf

ಲೇಖಕರು: **ಕೀರ್ತಿ ಜಯರಾಮ್**ರವರು ಆರ್ಗನೈಸೇಶನ್ ಫಾರ್ ಅರ್ಲಿ ಲಿಟರಸಿ ಪ್ರಮೋಷನ್ ನ ನಿರ್ದೇಶಕರಾಗಿದ್ದು ಹೆಚ್ಚಿನ ವಿವರಗಳು WWW.oelp.org ಯಲ್ಲಿ ಲಭ್ಯ.

oelpliteracy@yahoo.in

***

**ಚಿಂತನಾತ್ಮಕ ಪ್ರಶ್ನೆಗಳು:**

1. ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಆರಂಭಿಕ ಸಾಕ್ಷರತಾ ಕಾರ್ಯಕ್ರಮದ ಆರಂಭಿಕ ಹಂತದಲ್ಲಿ ಎದುರಿಸಬೇಕಾದ ಸವಾಲುಗಳೇನು? ಅವುಗಳನ್ನು ಪರಿಹರಿಸುವುದು ಹೇಗೆ? ವಿವರಿಸಿ.
2. ಮೂರು ಕವಲು ವಿಧಾನದಿಂದ ಆರಂಭಿಕ ಸಾಕ್ಷರತೆಯನ್ನು ಯಶಸ್ವಿಯಾಗಿ ಸಾಧಿಸಬಹುದು ಎಂದು ನಿಮಗೆ ಅನ್ನಿಸುತ್ತದೆಯೇ? ವಿವರಿಸಿ.
3. ಒಇಎಲ್‌ಪಿ ಹಸ್ತದ ಮಾದರಿಯಲ್ಲಿ ಚಿಂತನಾ ಕೌಶಲ್ಯವನ್ನು ಬೆಳೆಸಲು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲು ಕಾರಣಗಳೇನು?
4. ನಾಲ್ಕು ಘಟಕಗಳು ವಿಧಾನದ ದೈನಂದಿನ ಕಾರ್ಯಕ್ರಮಗಳು ಯಾಂತ್ರಿಕವಾಗಬಹುದೆಂದು ನಿಮಗನ್ನಿಸುತ್ತದೆಯೇ? ನಿಮ್ಮ ಅಭಿಪ್ರಾಯವನ್ನು ವಿವರಿಸಿ.
5. ಆರಂಭಿಕ ಸಾಕ್ಷರತಾ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಅನುಷ್ಠಾನಕ್ಕೆ ಪೂರಕವಾದ ಅಂಶಗಳು ಯಾವುವು ಎಂದು ನಿಮಗೆ ಅನಿಸುತ್ತದೆ? ವಿವರಿಸಿ.

**ಅನುವಾದಕರು: ಡಾ. ತಾ. ಶ್ರೀ. ಗುರುರಾಜ್**

**ಪರಿಶೀಲಕರು: ರಾಜಗೋಪಾಲ್**

**ಮೂಲ:** Language and Language Teaching Volume 4 Number 1 Issue 7 January 2015